AKSHARASURYA
E-ISSN: 2583-620X
Peer-Reviewed, Multi Lingual E-Journal
Volume – 02, Issue – 03, March 2023.

# ಗಿರೀಶ್ ಕಾರ್ನಾಡರ ಹಯವದನ ನಾಟಕದಲ್ಲಿ ಪಾಶ್ಚಾತ್ಯ ಮತ್ತು ದೇಸಿ ರಂಗ ತಂತ್ರಗಳ ಒಂದು ವಿವೇಚನೆ

**ಗಂಗಾಧರ ಬಿ. ಎಂ.**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಬುಕ್ಕಾಪಟ್ಟಣ,ಶಿರಾ ತಾಲ್ಲೂಕು
ತುಮಕೂರು ಜಿಲ್ಲೆ.
manojna83@gmail.com

ಕನ್ನಡ ರಂಗಭೂಮಿಗೆ ಅಂತರ್‌ರಾಷ್ಟ್ರೀಯ ಮಾನ್ಯತೆ ಗಳಿಸಿಕೊಟ್ಟ ಪ್ರಮುಖ ನಾಟಕಕಾರರಲ್ಲಿ ಗಿರೀಶ್ ಕಾರ್ನಾಡರು ಒಬ್ಬರು. ಅವರ ಹತ್ತಾರು ನಾಟಕಗಳು ಕನ್ನಡದಲ್ಲಿ ರಚನೆಗೊಂಡು ಬೇರೆ ಭಾಷೆಯಲ್ಲಿ ಅನುವಾದಗೊಂಡು ರಂಗಪ್ರಯೋಗದಿಂದ ಪ್ರಸಿದ್ದಿ ಪಡೆದಿರುವುದು ವಿಶೇಷವಾಗಿದೆ. ಭಾರತದ ರಂಗಭೂಮಿ ಮತ್ತು ಸಿನೆಮಾ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಕಾರ್ನಾಡರು ತಮ್ಮ ನಾಟಕದಲ್ಲಿ ಬಳಸುವ ಕಥಾ ವಸ್ತು, ತಂತ್ರ, ಮತ್ತು ವಿಚಾರಗಳಿಂದ ಭಾರತೀಯ ನಾಟಕ ಕ್ಷೇತ್ರದಲ್ಲಿ ವಿಶಿಷ್ಠ ಛಾಪು ಮೂಡಿಸಿದ್ದಾರೆ.

ಕಾರ್ನಾಡರ 'ಹಯವದನ' ನಾಟಕ ಸಹ ಈ ಎಲ್ಲಾ ಅಂಶಗಳಿಂದ ರಾಷ್ಟ್ರೀಯ ಮಾನ್ಯತೆ ಗಳಿಸಿರುವ ನಾಟಕಗಳಲ್ಲಿ ಒಂದಾಗಿದೆ. ಹಿಂದಿ, ಇಂಗ್ಲಿಷ್ ಮರಾಠಿ ಮತ್ತಿತರೆ ಭಾಷೆಗಳಿಗೆ ಅದು ಅನುವಾದಗೊಂಡು ಪ್ರದರ್ಶನಗೊಂಡಿರುವುದು ಅದರ ಜನಪ್ರಿಯತೆಗೆ ಸಾಕ್ಷಿಯಾಗಿದೆ. 'ಹಯವದನ' ನಾಟಕ ಧಾರವಾಡದಲ್ಲಿ ರಚನೆಗೊಂಡು 1971 ರಲ್ಲಿ ಮೊದಲ ಬಾರಿಗೆ ಪ್ರಕಟವಾಯಿತು. ಅಲ್ಲಿಂದೀಚೆಗೆ ಈ ನಾಟಕ ನೂರಾರು ಪ್ರದರ್ಶನ ಕಂಡಿದೆ. 'ಐತಿಹಾಸಿಕವಾಗಿ ರಂಗಭೂಮಿಗೆ ಜನಪದಾಂಶಗಳನ್ನು ಅಳವಡಿಸಿಕೊಂಡ ಹೆಗ್ಗಳಿಕೆ ಕಂಬಾರರ 'ಋಷ್ಯಶೃಂಗ' ನಾಟಕಕ್ಕೆ ಇದ್ದರೂ, ಜನಪದೀಯ ಅಂಶಗಳನ್ನು ಪ್ರದರ್ಶನಗೊಳಿಸಿದ ಹೆಗ್ಗಳಿಕೆ 'ಹಯವದನ' ನಾಟಕಕ್ಕೆ ಸಲ್ಲುತ್ತದೆ' ಎಂದು ಡಾ. ಮರುಳಸಿದ್ದಪ್ಪನವರು ಈ ನಾಟಕದ ವೈಶಿಷ್ಟ್ಯವನ್ನು ಗುರುತಿಸಿದ್ದಾರೆ.

ಕಾರ್ನಾಡರು ಈ ನಾಟಕಕ್ಕೆ ಸೋಮದೇವನ ಕಥಾ ಸರಿತ್ಸಾಗರದ 'ವೇತಾಲಪಂಚವಿಂಶತಿಕಥಾ'ದ ಆರನೆಯ ಕಥೆ ಆಧಾರಿಸಿದ್ದಾರೆ. ಜೊತೆಗೆ ಜರ್ಮನಿಯ ಟಾಮಸ್ ಮಾನ್ ಎಂಬುವರ (ದಿ ಟ್ರಾನ್ಸೋಸ್ಡ್ ಹೆಡ್ಸ್) 'ಬದಲಿಸಿದ ತಲೆಗಳು'ಎಂಬ ನೀಳ್ಗತೆ ಕೂಡ ನಾಟಕದ ಪಾತ್ರಗಳ ಪೋಷಣೆಗೆ ಪ್ರಭಾವ ಬೀರಿದೆ. ಈ ವಿಚಾರಗಳನ್ನು ಕಾರ್ನಾಡರೇ ಮುನ್ನುಡಿಯಲ್ಲಿ ಹಂಚಿಕೊಂಡಿದ್ದಾರೆ.

ಮಾನವರ ವ್ಯಕಿತ್ವದ ಅಪೂರ್ಣತೆ ಮತ್ತು ಪೂರ್ಣತೆಯ ಹಂಬಲವನ್ನು ನಾಟಕ ಕೇಂದ್ರವಾಗಿ ಹೊಂದಿದೆ. ಜೊತೆಗೆ ಮಾನವರ ಲೈಂಗಿಕ ಸಮಸ್ಯೆ ಕೂಡ ಇಲ್ಲಿ ಶೋಧನೆಗೆ ಒಳಗಾಗಿದೆ. ದೈವ, ಪ್ರಾಣಿ ಮತ್ತು ಮಾನವ ಈ ಮೂರು ನೆಲೆಗಳಲ್ಲಿ ಅಪೂರ್ಣತೆಯ ಶೋಧ ವಿವೇಚನೆಗೆ ಒಳಗಾಗಿದೆ. ಮಾನವರ ನೆಲೆಯಲ್ಲಿ ದೇವದತ್ತ, ಕಪಿಲ ಮತ್ತು ಪದ್ಮಿನಿ ಎಂಬ ಮೂರು ಪ್ರಮುಖ ಪಾತ್ರಗಳು ನಾಟಕದಲ್ಲಿವೆ. ನಾಟಕವು ದೈವನೆಲೆಯಲ್ಲಿ ಆನೆಮುಖದ ಗಣೇಶನ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುವುದು. ಗಣೇಶನ ರೂಪದ ಅಪೂರ್ಣತೆಯನ್ನು ನಾಟಕ ಗುರುತಿಸುತ್ತದೆ. ಮೊದಲನೆ ಅಂಕದಲ್ಲಿಯೇ ಕುದುರೆ ಮುಖದ ಹಯವದನನ ಪ್ರವೇಶವಾಗುತ್ತದೆ. ಹಯವದನನ ಅಪೂರ್ಣತೆಗೆ ಪರಿಹಾರ ಶೋಧನೆಯಾಗುತ್ತಲೇ, ದೇವದತ್ತ ಕಪಿಲ ಮತ್ತು ಪದ್ಮಿನಿಯರ ಕಥೆ ಪ್ರಾರಂಭವಾಗುತ್ತದೆ. ಗೆಳೆಯರಿಬ್ಬರು ದುರಂತ ಸಾವಿಗೆ ಈಡಾಗಿ ಪದ್ಮಿನಿಯು ಸತಿ ಹೋಗುವುದರೊಂದಿಗೆ ನಾಟಕ ಮರಳಿ ಹಯವದನನ ಕಥೆಗೆ ಹೊರಳುತ್ತದೆ. ಹಾಗಾಗಿ ಮುಕ್ತಾಯ ಕೂಡ ಹಯವದನ ಪೂರ್ಣಾಂಗನಾಗುವುದರೊಂದಿಗೆ ಪೂರ್ಣಗೊಳ್ಳುತ್ತದೆ. ಇದು ಪ್ರಾಣಿ ನೆಲೆಯ ಅಪೂರ್ಣತೆಯ ವಿವೇಚನೆಯಾಗಿದೆ.

'ಕನ್ನಡದ ನಾಟಕಗಳಲ್ಲೆ ಹಯವದನ ಸುಂದರವಾದ ನಾಟಕ' ಎಂದು ರಂಗಕರ್ಮಿ ಕೆ.ವಿ ಅಕ್ಷರ ಹೊಗಳಿರುವುದು ಓಚಿತ್ಯ ಪೂರ್ಣವೇ ಆಗಿದೆ. ಏಕೆಂದರೆ ಇಡೀ ನಾಟಕ ವಿವಿಧ ರಂಗತಂತ್ರಗಳಿಂದ ತುಂಬಿದೆ. ನಮ್ಮ ದೇಸೀ ಜನಪದ ಮತ್ತು ಜರ್ಮನಿಯ ಖ್ಯಾತ ನಾಟಕಕಾರ ಬ್ರೆಕ್ಟ್‌ನ ಎಪಿಕ್ ರಂಗತಂತ್ರಗಳ ಯಶಸ್ವಿ ಸಂಯೋಜನೆ ಇಲ್ಲಿ ಕಾಣಬಹುದು. ಹಾಗಾಗಿ ಈ ನಾಟಕದಲ್ಲಿ ಕಥೆಯಷ್ಟೇ ಮುಖ್ಯವಾಗಿ ನಾಟಕದ ತಂತ್ರಗಳೂ ಗಮನ ಸೆಳೆಯುತ್ತದೆ. ನಾಟಕದಲ್ಲಿ ಪಾಶ್ಚಾತ್ಯ ಮತ್ತು ದೇಸಿ ರಂಗ ತಂತ್ರಗಳನ್ನು ಬಳಸಿಕೊಳ್ಳಲಾಗಿದೆ. ಅವುಗಳ ಕುರಿತ ಅವಲೋಕನ ಈ ಮುಂದಿನಂತಿದೆ.

**ದೇಸಿ ರಂಗತಂತ್ರಗಳು**

ಈಗಾಗಲೇ ಪ್ರಸ್ತಾಪಿಸಿರುವಂತೆ ನಾಟಕಗಳಲ್ಲಿ ಜನಪದೀಯ ವಸ್ತು, ವಿಚಾರ ತಂತ್ರಗಳನ್ನು ಬಳಸಿದ ಮೊದಲ ಸಾಲಿನವರಲ್ಲಿ ಕಾರ್ನಾಡರು ಒಬ್ಬರು. ಶಿಕ್ಷಣ ಪಡೆದ ನಗರ ಸಮುದಾಯದ ನಾಟಕಕಾರರಿಗೆ ಅಪಥ್ಯ ಎಂಬಂತಿದ್ದ ಜನಪದೀಯ ಸೊಗಡನ್ನು ತಂದು ನಾಟಕಗಳನ್ನು ಹೆಚ್ಚು ಸಮಾಜಮುಖಿಯಾಗಿಸಿದ ಹಿರಿಮೆ ಕಾರ್ನಾಡರಿಗೂ ಸಲ್ಲುತ್ತದೆ.

ಭಾಗವತ: ಕರ್ನಾಟಕದ ಕರಾವಳಿಯಲ್ಲಿ ಯಕ್ಷಗಾನ ಒಂದು ಪ್ರಮುಖ ಜನಪದ ಕಲೆ. ಈ ಯಕ್ಷಗಾನದ ಭಾಗವತ ತಾಳ ಹಾಕುವ, ಗಾಯನ ಮಾಡುವ ಮತ್ತು ಸಂಭಾಷಣೆಯನ್ನು ನಡೆಸುವ ಮುಖ್ಯ ಕಲಾವಿದ. ಈ ಹಯವದನ ನಾಟಕದಲ್ಲೂ ಭಾಗವತ ಪ್ರಮುಖ ಪಾತ್ರದಾರಿ. ಕಾರ್ನಾಡರೇ ಹೇಳಿರುವಂತೆ ಹಯವದನದ ಭಾಗವತ ಯಕ್ಷಗಾನದ ಭಾಗವತನಿಗಿಂತ ಭಿನ್ನ. ಇಲ್ಲಿ ಭಾಗವತನ ಪಾತ್ರ ಕಥೆಗೆ ಕೊಂಡಿಯಷ್ಟೇ ಅಲ್ಲ. ಒಂದು ಪಾತ್ರವಾಗಿ ಸಹ ಮಹತ್ವದ್ದಾಗಿದೆ. ಕಥೆಯನ್ನು ನಮ್ಮ ಯಕ್ಷಗಾನದಂತೆ ನಿರೂಪಣೆ ಮಾಡುವ ಕೆಲಸ ಈ ಭಾಗವತನ ಪಾತ್ರದ್ದು. ಕಥೆಯನ್ನು ಪ್ರಾರಂಭ ಮಾಡುವುದು, ಮೊದಲನೆಯ ಅಂಕವನ್ನು ಮುಗಿಸಿ ವಿಶ್ರಾಂತಿ ನೀಡುವುದು, ಮತ್ತೊಂದು ಅಂಕದ ನಾಟಕವನ್ನು ಮುಂದುವರೆಸುವುದು ಕೂಡ ಭಾಗವತನೆ. ನಾಟಕದ ಎಲ್ಲಾ ಪಾತ್ರದೊಂದಿಗೆ ಭಾಗವತನ ಸಂಭಾಷಣೆ ಇದೆ. ಒಮ್ಮೊಮ್ಮೆ ಪಾತ್ರಗಳಿಗೆ ದಾರಿ ತೋರುವುದು ಸಹ ಭಾಗವತರ ಜವಾಬ್ದಾರಿಯಾಗಿರುತ್ತದೆ. ಭೂತ, ವರ್ತಮಾನ, ಭವಿಷ್ಯ ಎಲ್ಲ ಕಾಲಗಳಲ್ಲೂ ಭಾಗವತನಿಗೆ ಪ್ರಾಶಸ್ತ್ಯ ಇದ್ದೇ ಇದೆ. ಈ ತಂತ್ರವು ನಮ್ಮ ಯಕ್ಷಗಾನದ ಭಾಗವತರನ್ನು ಹೋಲಿಸಿದರೆ ಆಶ್ಚರ್ಯವಿಲ್ಲ. ಇಡೀ ನಾಟಕನ್ನು ಆವರಿಸಿಕೊಂಡ ಅನಿವಾರ್ಯ ವ್ಯಕ್ತಿಯಾಗಿ ಭಾಗವತರು ಕಾಣುತ್ತಾರೆ. ಪುರಾಣದ ಕಥೆಯನ್ನು ವರ್ತಮಾನಗೊಳಿಸುವಲ್ಲಿ ಭಾಗವತರು ಪ್ರಮುಖ ಕರ್ತವ್ಯ ನಿರ್ವಹಿಸುತ್ತಾರೆ.

ಪೌರಾಣಿಕ ಕಥಾನಕದ ಬಳಕೆ: ವೇತಾಳ ಪಂಚ ವಿಶಂತಿ ಕಥಾದ ಆರನೇ ಕಥೆ ಕಥಾ ಸರಿತ್ಸಾಗರದಲ್ಲಿದೆ. ಕಾಲಿಯ ಗುಹೆಯ ಪ್ರಕರಣದ ನಂತರ ಪದ್ಮಿನಿಯು ದೇವದತ್ತನ ಶಿರವುಳ್ಳ ಕಪಿಲನ ದೇಹವೊಂದಿದವನೊಂದಿಗೆ ಸಂಸಾರ ನೆಡೆಸಲು ತೆರಳುವ ಸಂದರ್ಭದ ಜಿಜ್ಞಾಸೆಯನ್ನು ವಿಕ್ರಮ ಬೇತಾಳ ಕಥೆಯ ಅನುಸಾರವೇ ರೂಪಿಸಲಾಗಿದೆ. ಇದೊಂದು ಪುರಾಣ ಕಥೆ. ಇದನ್ನು ಬಳಸುವುದರ ಮೂಲಕ ಆಧುನಿಕ ಮಾನವರ ಮೂಲ ಲೈಂಗಿಕ ಸಮಸ್ಯೆಯ ಶೋಧನೆಗೆ ಕಾರ್ನಾಡರು ಬಳಸಿದ್ದಾರೆ.

ಗೊಂಬೆಗಳ ಬಳಕೆ: ನಾಟಕದ ಮಹತ್ವದ ತಂತ್ರಗಳಲ್ಲಿ ಗೊಂಬೆಗಳ ಸಂಭಾಷಣೆ ಸಹ ಒಂದು. ಇದೊಂದು ದೇಸಿ ತಂತ್ರಗಳಲ್ಲಿ ಒಂದಾಗಿದೆ. ನಾಟಕದಲ್ಲಿ ಎರಡು ಬಾರಿ ಗೊಂಬೆಗಳ ಸಂಭಾಷಣೆ ನಡೆಯುತ್ತದೆ. ನಾಟಕದ ಉತ್ತರ ಭಾಗದಲ್ಲಿ ಬಳಕೆಯಾಗಿರುವುದು ವಿಶೇಷ. ನಾಟಕದ ಸಂದಿಗ್ಧ ಸಂಗತಿಗಳನ್ನು ಪ್ರೇಕ್ಷಕರಿಗೆ ಮುಟ್ಟಿಸಲು ಕಾರ್ನಾಡರು ಇವನ್ನು ಬಳಸಿದ್ದಾರೆ. ಪದ್ಮಿನಿಯ ಮನೋಭಾವಗಳನ್ನು ಅಂತರಂಗದ ಆಸೆಗಳನ್ನು ಅದರಿಂದುಂಟಾದ ತೀರ್ಮಾನಗಳನ್ನು ಗೊಂಬೆಗಳ ಮೂಲಕ ಪ್ರಕಟಗೊಳಿಸುವ ತಂತ್ರ ಇದರಲ್ಲಿದೆ. ಮೊದಲನೇ ಭಾರಿ ಗೊಂಬೆಗಳನ್ನು ಪದ್ಮಿನಿ ಬಿಸಾಡುವಂತೆ ಸೂಚಿಸುವುದು ಎರಡನೇ ಭಾರಿಗೆ ಭಾಗವತರೆ ಗೊಂಬೆಗಳನ್ನು ಎಸೆಯುವಂತೆ ಸೂಚಿಸುವುದು, ನಾಟಕವು ಒಂದು ಮಗ್ಗುಲನ್ನು ಬದಲಿಸುವ ಸಂದರ್ಭವೇ ಆಗಿದೆ. ನಮ್ಮ ಜಾನಪದ ರಂಗಭೂಮಿಯ ತೊಗಲು ಗೊಂಬೆಗಳ ಆಟ ಮತ್ತು ಜಾನಪದ ಕಥೆಗಳಲ್ಲಿ ಈ ರೀತಿಯ ಗೊಂಬೆಗಳ ಸಂಭಾಷಣೆ ನಮಗೆ ತಿಳಿದಿರುವುದೇ ಆಗಿದೆ. ದೇವನೂರು ಮಹಾದೇವ ಅವರ ಕುಸುಮಬಾಲೆಯಲ್ಲಿ ಜ್ಯೋತಮ್ಮಗಳ ಸಂಭಾಷಣೆಯನ್ನು ಇದು ನೆನಪಿಸಿದರೆ ಆಶ್ಚರ್ಯವೇನಿಲ್ಲ. ಹಲವು ಜನಪದ ಕಥೆಗಳಲ್ಲಿ ಗೊಂಬೆಗಳ ಸಂಭಾಷಣೆ ಇರುವುದನ್ನು ನಾವು ಗಮನಿಸಬಹುದು.

ಸಂಭಾಷಣೆ: ಭಾಷೆಯ ವಿಚಾರದಲ್ಲಿ ಕಾರ್ನಾಡರು ಹೊಸ ಪ್ರಯೋಗವನ್ನು ಈ ನಾಟಕದಲ್ಲಿ ಮಾಡಿದ್ದಾರೆ. ನಾಟಕದಲ್ಲಿ ಆಗಾಗ ಮಿಂಚುವ ಗಾದೆಗಳು ಆಡು ಮಾತುಗಳು ನಮ್ಮ ಜನಪದ ರಂಗಭೂಮಿಯಿಂದ ಬಂದ ಬಳುವಳಿ ಎಂದರೆ ತಪ್ಪಿಲ್ಲ. ಕಾರ್ನಾಡರು ಈ ಜನಪದರ ಸತ್ವಗಳನ್ನು ಅರ್ಥಪೂರ್ಣವಾಗಿ ಬಳಸಿರುವುದನ್ನು ನಾವಿಲ್ಲಿ ಗುರುತಿಸಬಹುದು. 'ಅದಲು ಬದಲು ಕಂಚಿ ಕದಲು', 'ಅವರನ್ನು ಬಿಟ್ಟು ಇವರ್‍ಯಾರು' ಎಂಬ ಮಕ್ಕಳಾಟದ ಗಾದೆ ನಾಟಕದಲ್ಲಿ ಪ್ರಮುಖ ಸಂದರ್ಭದಲ್ಲಿ ಬಳಕೆಯಾಗಿದೆ. ದೇವದತ್ತ ಮತ್ತು ಕಪಿಲರ ಶಿರಗಳು ಅದಲು ಬದಲಾದ ಸಂದರ್ಭದಲ್ಲಿ ಈ ಗಾದೆ ವಿಶೇಷ ಅರ್ಥ ಹೊಳೆಯಿಸುತ್ತದೆ. ಹಲವು ಕಡೆಯ ಸಂಭಾಷಣೆ ದೇಸಿ ಶ್ರೀಮಂತಿಕೆಯಿಂದ ಹೊಳೆದಿರುವುದನ್ನು ಕಾಣಬಹುದು. ಕೆಲವೊಮ್ಮೆ ಈ ಜನಪದ ಶೈಲಿಯ ಸಂಭಾಷಣೆ ತನ್ನ ಮೊನಚನ್ನು ಕಳೆದುಕೊಂಡಿರುವುದನ್ನು ಮಾಧವ ಕುಲಕರ್ಣಿ ಗುರುತಿಸುತ್ತಾರೆ.

**ಪಾಶ್ಚಾತ್ಯ ರಂಗ ತಂತ್ರಗಳು**

ಎಪ್ಪತ್ತರ ದಶಕದಲ್ಲಿ ರಂಗಭೂಮಿಯ ಚಲನಶೀಲತೆ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗುತ್ತಿದ್ದ ಸಂದರ್ಭದಲ್ಲಿಯೇ ಹಯವದನ ರಂಗದ ಮೇಲೆ ಬಂದು ಹೊಸ ಸಂಚಲನ ಮೂಡಿಸಿತು. ಹೊಸ ತಂತ್ರಗಳು, ಹೊಸ ಭಾಷೆ, ಹೊಸ ವಸ್ತುವಿನೊಂದಿಗೆ ಮೈದುಂಬಿಕೊಂಡ ಹಯವದನ ನಾಟಕ ಕ್ಷೇತ್ರದ ಹೊಸ ಆಲೋಚನೆಗಳಿಗೆ ಮೂರ್ತ ರೂಪ ನೀಡಿತು. ಅದು ಯಶಸ್ವಿಯಾಗಲು ಕಾರಣವಾದ ಪಾಶ್ಚಾತ್ಯ ತಂತ್ರಗಳಲ್ಲಿ ಮುಕ್ತ ರಂಗಭೂಮಿಯ ತಂತ್ರಗಳು ಸಹ ಮುಖ್ಯವಾಗಿವೆ.

ಎಪಿಕ್ ರಂಗಭೂಮಿ: ಮುಕ್ತ ರಂಗಭೂಮಿ ಎಂಬು ಕರೆಸಿಕೊಳ್ಳುವ ಎಪಿಕ್ ರಂಗಭೂಮಿಯ ತಂತ್ರಗಳನ್ನು ಪ್ರತಿಪಾದಿಸಿದವ ಜರ್ಮನಿಯ ನಾಟಕಕಾರ ಬ್ರೆಕ್ಟ್, ಆ ಬ್ರೆಕ್ಟನ ತಂತ್ರಗಳು ಈ ನಾಟಕದಲ್ಲಿ ಅನಾವರಣಗೊಂಡಿರುವುದನ್ನು ವಿಮರ್ಶಕರು ಗುರುತಿಸಿದ್ದಾರೆ. ದೃಶ್ಯಗಳ ರಚನೆ, ಪಾತ್ರಗಳ ನಿಲುವು, ಸೂತ್ರದಾರನ ಉಪಯೋಗ, ಮುಖವಾಡಗಳು, ಹಾಡುಗಳು, ಕುಣಿತ, ಸ್ವಗತಗಳು, ಓದುಗ/ಪ್ರೇಕ್ಷಕರನ್ನು ಉದ್ದೇಶಿಸಿದ ಮಾತುಗಳು, ಹಯವದನನ ಕಥೆಯನ್ನು ಪೀಠಿಕೆ ಮತ್ತು ಉಪಸಂಹಾರದ ರೀತಿಯಲ್ಲಿ ಉಪಯೋಗಿಸಿರುವ ಶೈಲಿ– ಇವೆಲ್ಲಾ ಎಪಿಕ್ ರಂಗ ಸಿದ್ಧಾಂತದ ಅಳವಡಿಕೆಗೆಯ ತಂತ್ರಗಳೇ ಆಗಿವೆ. ಆಘಾತ ಚಿಕಿತ್ಸೆ ಮತ್ತು ದೂರೀಕರಣ ಪರಿಣಾಮ ತತ್ವಗಳು ನಾಟಕದಲ್ಲಿ ಬಳಕೆಗೊಂಡಿವೆ. ದೇವದತ್ತ ಮತ್ತು ಕಪಿಲರು ತಮ್ಮ ತಲೆಗಳನ್ನು ಕತ್ತರಿಸಿಕೊಳ್ಳುವುದು, ಪದ್ಮಿನಿ ಶಿರಗಳನ್ನು ಬದಲಿಸಿ ಜೋಡಿಸುವುದು ಇದಕ್ಕೆ ಉದಾಹರಣೆಯಾಗುತ್ತದೆ. ಇಡೀ ನಾಟಕವನ್ನು ಪೂರ್ವಾರ್ಧ ಮತ್ತು ಉತ್ತರಾರ್ಧ ಎಂಬ ಎರಡೇ ಭಾಗಗಳಾಗಿ ವಿಂಗಡಿಸಿರುವುದು ಸಹ ಒಂದು ಪಾಶ್ಚಾತ್ಯ ತಂತ್ರವಾಗಿದೆ. ಭಾಗವತನ ಮಾತು ಬಳಕೆ, ಪಾತ್ರಗಳೊಂದಿಗೆ ಅವನ ಸಂಭಾಷಣೆ ಸಹ ಪಾಶ್ಚಾತ್ಯ ಪ್ರಭಾವಕ್ಕೆ ಒಳಗಾಗಿದೆ.

'ನಾಟಕವು ನಾಟಕವಾಗಿಯೇ ಪ್ರೇಕ್ಷಕರಿಗೆ ಅರಿವನ್ನು ಮೂಡಿಸಬೇಕು. ನಾಟಕವು ಕೇವಲ ಪುರಾಣ ಇತಿಹಾಸವಾಗದೇ ವಾಸ್ತವದ ಹಾದಿಯನ್ನು ತೋರಬೇಕು. ನಾಟಕದಲ್ಲಿ ಕೇವಲ ಪ್ರತಿಷ್ಠಿತರಿಗಷ್ಟೆ ಪ್ರಾಧಾನ್ಯತೆ ಎಂಬುದು ಅದಲು ಬದಲಾಗಿ ಅಪ್ರತಿಷ್ಠರ ಗುಣಗಳೂ ಹೊಳೆಯಬೇಕು' ಎಂಬೆಲ್ಲ ಗುಣಗಳನ್ನು ಹೊಂದಿರುವ ಎಪಿಕ್ ರಂಗಭೂಮಿಯ ಹಲವು ಅಂಶಗಳನ್ನು ಕಾರ್ನಾಡರು ಸಮರ್ಥವಾಗಿ ಈ ನಾಟಕದಲ್ಲಿ ಸಮ್ಮಿಳನಗೊಳಿಸಿದ್ದಾರೆ. ನಾಟಕದಲ್ಲಿ ಬ್ರಾಹ್ಮಣ ದೇವದತ್ತನಿಗಿಂತ ಕಪಿಲನ ಗುಣಗಳು ಮಿಂಚಿರುವುದು ಸುಲಭವಾಗಿ ಅರಿವಾಗುತ್ತದೆ. ನಾಟಕವು ಪ್ರೇಕ್ಷಕರಿಗೆ ವಾಸ್ತವ ಪ್ರಜ್ಞೆಯನ್ನು ಮೂಡಿಸುವಲ್ಲಿ ಹಲವು ಸಂಭಾಷಣೆಗಳು ಮತ್ತು ಹಾಸ್ಯ ಸನ್ನಿವೇಶಗಳು ನೆರವಾಗಿವೆ. ಭಾಗವತನ ಮಧ್ಯಪ್ರವೇಶ ನಮಗೆ ನಾಟಕದ ವಾಸ್ತವದ ಅರಿವನ್ನು ಹೆಚ್ಚಿಸುತ್ತದೆ. ಕಾಳಿಯ ಆಕಳಿಕೆ, ನಟನ ಗಾಬರಿ, ಮೇಳಗಳ ಹಾಡು ಇವೆಲ್ಲ ನಮಗೆ ರಂಗ ಸಜ್ಜಿಕೆಯ ವಾಸ್ತವವನ್ನು ಉಂಟು ಮಾಡುತ್ತವೆ. ಗಂಭೀರವಾದ ಕಥಾ ವಸ್ತುವೊಂದನ್ನು ಹಾಸ್ಯ, ವ್ಯಂಗ್ಯದ ಮೂಲಕವೇ ನಿರೂಪಿಸುವ ತಂತ್ರ ಸಹ ಎಪಿಕ್ ರಂಗಭೂಮಿಯದ್ದೇ ಎಂದು ವಿಮರ್ಶಕರು ಗುರುತಿಸಿದ್ದಾರೆ. ಗಿರಡ್ಡಿಯವರು ಹಯವದನ ನಾಟಕ ಕುರಿತಂತೆ 'ಮಾನ್‌ನ ತಲೆಗೆ ಬ್ರೆಕ್ಟ್‌ನ ದೇಹ' ಎಂಬ ಲೇಖನವನ್ನೇ ಬರೆದಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಮುಖವಾಡಗಳ ಬಳಕೆ: ಮುಖವಾಡಗಳ ಬಳಕೆ ಕೂಡ ಪಾಶ್ಚಾತ್ಯ ರಂಗ ತಂತ್ರವೆಂದು ನಾವಿಲ್ಲಿ ಪರಿಗಣಿಸಬಹುದು. ಏಕೆಂದರೆ ಗ್ರೀಕ್ ನಾಟಕಗಳಲ್ಲಿ ಮುಖವಾಡಗಳ ಬಳಕೆ ಇತ್ತು. ಇದನ್ನು ಕಾರ್ನಾಡರು ಹಯವದನನ ಪಾತ್ರದಲ್ಲಿ ಮತ್ತು ದೇವದತ್ತ ಮತ್ತು ಕಪಿಲರ ಶಿರಸ್ಸು ಬದಲಾದ ಕಾಲದಲ್ಲಿ ಮುಖವಾಡಗಳ ಬಳಕೆಯ ತಂತ್ರವನ್ನು ಬಳಸಿ ನಾಟಕದ ಕೌತುಕವನ್ನು ಹೆಚ್ಚಿಸಿದ್ದಾರೆ.

ಮೇಳಗಳು: ಗ್ರೀಕ್ ನಾಟಕಗಳಲ್ಲಿ ಮೇಳದ ಬಳಕೆ ಇರುವುದನ್ನು ನಾವು ಗಮನಿಸಿದಂತೆ, ಈ ನಾಟಕದಲ್ಲಿ ಒಟ್ಟು ಐದು ಬಾರಿ ಬಳಕೆಯಾಗಿರುವ ಹೆಣ್ಣು ಮೇಳ ಸಹ ನಾಟಕದ ದಿಕ್ಕನ್ನು ಮತ್ತು ನಾಟಕದ ಸೂಚ್ಯಾರ್ಥವನ್ನು ಪ್ರೇಕ್ಷಕರಿಗೆ ತಲುಪಿಸುವ ಪ್ರಮುಖ ತಂತ್ರವಾಗಿ ಬಳಕೆಯಾಗಿದೆ. ಪದ್ಮಿನಿಯ ಎಲ್ಲಾ ಆಂತರಿಕ ಬಯಕೆಗಳನ್ನು ಹೇಳುವಲ್ಲಿ ನಾಟಕಕಾರರು ಬಳಸಿರುವುದನ್ನು ನಾವು ಗಮನಿಸಬಹುದು. ಹೆಣ್ಣು ಮೇಳದೊಡನೆ ನಮ್ಮ ಭಾಗವತ ಸಹ ಹಾಡುವುದು ಕಥೆಯ ಓಟಕ್ಕೆ ಉತ್ತಮ ಲಯ ಒದಗಿಸುತ್ತದೆ. ಮೇಳದ ಗಾನ ನಾಟಕಕ್ಕೆ ಒಂದು ಮುನ್ಸೂಚನೆ ನೀಡಿದೆ. ಪ್ರೇಕ್ಷಕರಿಗೆ ಗಾನದ ಸವಿಯಂತೂ ಸಿಕ್ಕೇ ಸಿಗುತ್ತದೆ. ಒಟ್ಟಿನಲ್ಲಿ ಮೇಳದ ಬಳಕೆ ನಾಟಕದ ಒಂದು ಪಾಶ್ಚಾತ್ಯ ರಂಗತಂತ್ರ ಎಂದು ತಿಳಿಯಬಹುದಾಗಿದೆ.

ಅಸಂಗತ ತತ್ವ: ಅಸ್ತಿತ್ವವಾದದ ಅಂಗವಾಗಿ ಗುರುತಿಸಲ್ಪಡುವ ಅಸಂಗತ ತತ್ವವು ಪಾಶ್ಚಾತ್ಯ ಸಾಹಿತ್ಯ ರಂಗದಲ್ಲಿ ಚಿರ ಪರಿಚಿತ. ಹಯವದನ ನಾಟಕದಲ್ಲೂ ಕಾರ್ನಾಡರು ಅಸಂಗತ ತ್ವವನ್ನು ಬಳಸಿರುವುದನ್ನು ಕಾಣಬಹುದು. ಗೊಂಬೆಗಳ ಸಂಭಾಷಣೆ, ಕಪಿಲ ದೇವದತ್ತರ ಶಿರ ಬದಲಾವಣೆ, ಹಯವದನನ ಪಾತ್ರ, ಕಾಳಿಯ ಪಾತ್ರ ಇಲ್ಲೆಲ್ಲಾ ನಾವು ಅಸಂಗತತೆಯನ್ನು ಗುರುತಿಸಬಹುದೆಂದು ಬಸವರಾಜ ರಾಯ್ಕರ್ ರವರು ತಮ್ಮ 'ಅಸಂಗತ' ಎಂಬ ಕೃತಿಯಲ್ಲಿ ತಿಳಿಸುತ್ತಾರೆ. "ಕಾರ್ನಾಡರ ದರ್ಶನವು ಗಂಭೀರವೂ ಸುಸಂಬದ್ಧವೂ ಆಗಿದೆ. ಆದರೆ ಆ ದರ್ಶನವನ್ನು ಅಭಿವ್ಯಕ್ತಿಸುವ ತಂತ್ರ ಆಂಶಿಕವಾಗಿ

ಅಸಂಗತವಾಗಿದೆ” ಎಂದು ರಾಯ್ಕರ್ ಅವರು ಗುರುತಿಸುವುದು ಮುಖ್ಯವೆನಿಸುತ್ತದೆ. ನಾಟಕದ ಮೂಲ ಆಶಯಗಳನ್ನು ವಾಸ್ತವಕ್ಕೆ ತರುವ ಸಂಧರ್ಭದಲ್ಲಿ ನಾಟಕದ ನಿಯತಿಯನ್ನು ಮೀರಿ ಅಸಂಗತತೆಯ ತಂತ್ರವನ್ನು ಅಳವಡಿಸಿಕೊಳ್ಳುವುದು ಅನಿವಾರ್ಯವೂ ಮತ್ತು ಒಂದು ತಂತ್ರವೂ ಆಗಿದೆ.

ಗಿರೀಶ್ ಕಾರ್ನಡರು ತಮ್ಮ ‘ಯಯಾತಿ’, ‘ತುಘಲಕ್’, ‘ತಲೆದಂಡ’, ‘ಅಂಜುಮಲ್ಲಿಗೆ’, ‘ಅಗ್ನಿ ಮತ್ತು ಮಳೆ’– ಹೀಗೆ ಸಾಕಷ್ಟು ನಾಟಕಗಳನ್ನು ರಚಿಸಿದ್ದರೂ, ಇಂದಿಗೂ ‘ಹಯವದನ’ ನಾಟಕ ತನ್ನ ಸಹಜ ನಾಟಕೀಯ ತಂತ್ರಗಳಿಂದ ಭಾರತೀಯ ನಾಟಕ ಕ್ಷೇತ್ರದಲ್ಲಿ ನೆಲೆ ನಿಂತಿದೆ. ರಂಗತಂತ್ರಗಳ ದೃಷ್ಟಿಯಿಂದ ಈ ನಾಟಕ ಪಾಶ್ಚಾತ್ಯ ಮತ್ತು ದೇಶೀಯ ತಂತ್ರಗಳಿಗೆ ಋಣಿಯಾಗಿದ್ದು ಸಮತೂಕದ ಸಮಪಾಕದಂತೆ ಕಂಡು ಬಂದರೆ ಅತಿಶಯೋಕ್ತಿಯೇನಲ್ಲ.

**ಗ್ರಂಥಋಣ ಹಾಗೂ ಪರಾಮರ್ಶನ ಗ್ರಂಥಗಳು**


1. ಹಯವದನ: ಗಿರೀಶ್ ಕಾರ್ನಾಡ
2. ಒಡನಾಟ: ಡಾ. ಕೆ. ಮರುಳ ಸಿದ್ದಪ್ಪ
3. ಆಧುನಿಕ ಕನ್ನಡ ನಾಟಕ : ಡಾ. ಕೆ. ಮರುಳ ಸಿದ್ದಪ್ಪ
4. ಗಿರೀಶ್ ಕಾರ್ನಾಡ್ ಮತ್ತು ಭಾರತೀಯ ರಂಗಭೂಮಿ: ಡಾ. ಜಿ. ಎಸ್. ಅಮೂರ
5. ಗಿರೀಶ್ ಕಾರ್ನಾಡರ ನಾಟಕ ಪ್ರಪಂಚ: ಮಾಧವ ಕುಲಕರ್ಣಿ
6. ನಾಟಕ ಸಾಹಿತ್ಯ ಮತ್ತು ರಂಗಭೂಮಿ: ಡಾ.ಗಿರಡ್ಡಿ ಗೋವಿಂದರಾಜ
7. ಸನ್ನಿವೇಶ: ಡಾ. ಯು. ಆರ್. ಅನಂತಮೂರ್ತಿ
8. ಅಸಂಗತ: ಬಸವರಾಜ ನಾಯ್ಕರ್.